**ಲೇಖಕಿಯೊಬ್ಬಳು ಸುತ್ತಾಟ ನಡೆಸಿರುವುದು ಕನ್ನಡ ಸಾರಸ್ವತ ಲೋಕಕ್ಕೆ ಅಪರೂಪವಾದದ್ದು. ಇಂತಹ ಸುತ್ತಾಟಗಳ ಸಾಹಸದಲ್ಲಿ ಸದಾ ಕಾಲ ಸ್ಮೃತಿಯಲ್ಲುಳಿದಂತಹ ಸಂಗತಿಗಳನ್ನು ನೆನಪಿಸಿಕೊಳ್ಳಬಹುದೆ?**

ನಾನು ಆಯ್ದುಕೊಂಡ ಕಥಾವಸ್ತುವಿಗೆ, ಜೀವನ ಚರಿತ್ರೆಗಳಿಗೆ ಅಧ್ಯಯನ ಮತ್ತು ಪ್ರವಾಸ ಅನಿವಾರ್ಯವಿತ್ತು. ಅಲ್ಪ ಹಣದಲ್ಲಿ ಕನಸಿನ ಪಯಣ ಕೈಗೊಂಡದ್ದು ಆ ಕಾಲಕ್ಕೆ ಸಾಹಸವೇ ಆಗಿತ್ತು. ಹಾಗೆಂದೇ, ಬಹಳಷ್ಟು ನೆನಪುಗಳು ಹಸಿರಾಗಿಯೇ ಉಳಿದಿವೆ.

22 ವರ್ಷಗಳಿಗೂ ಹಿಂದೆ, ಮೇರಿ ಕ್ಯೂರಿಯನ್ನು ಅರಸಿ ಪ್ಯಾರಿಸ್‌ಗೆ ಹೊರಟದ್ದು ನನ್ನ ಮೊದಲ ಪ್ರವಾಸವಾಗಿತ್ತು. ಮೇರಿ ಮತ್ತು ಆಕೆಯ ಪತಿ ಪಿಯರ್ ಪ್ರಯೋಗಶಾಲೆಯ ನೋಟ್‌ಬುಕ್‌ನ ಹಾಳೆಗಳು ಈಗಲೂ ವಿಕಿರಣ ಚಿಮ್ಮುತ್ತಿರುವುದನ್ನು ಅಲ್ಲಿ ಕಂಡಿದ್ದೆ. ಮೇರಿ ಕ್ಯೂರಿಯ ಮೇಜು, ಕುರ್ಚಿ, ಕನ್ನಡಕ, ಉದ್ದನೆಯ ನಿಲುವಂಗಿ ಎಲ್ಲವನ್ನೂ ಮುಟ್ಟಿ ಮುಟ್ಟಿ ಮುದಗೊಂಡ ಆ ಭಾವುಕ ಕ್ಷಣ ನನ್ನ ನೆನಪಲ್ಲಿ ಸದಾ ಹಸಿರು.

ನನ್ನ ಕಣ್ಣಲ್ಲಿ ನೀರು ತರಿಸಿದ ಮತ್ತೊಂದು ಕ್ಷಣ ಸೋಹನ್ ಲಾಲ್ ಭಾರತಿ ಅವರು ಜಲಿಯನ್‌ವಾಲಾ ಬಾಗ್‌ನಲ್ಲಿ ಆ ಖರ್ಜೂರದ ಮರದ ಬಳಿಗೆ ಕರೆದೊಯ್ದು 'ಈ ಮರದ ಬಳಿ ಗುಂಡಿನಿಂದ ಛಿದ್ರವಾದ ನನ್ನ ತಂದೆಯ ದೇಹವನ್ನು ನನ್ನ ತಾಯಿ ಗುರುತಿಸಿದರು' ಎಂದದ್ದು. ಅವರ ತಾಯಿ ಅತ್ತರ್ ಕೌರ್, ಜಲಿಯನ್‌ವಾಲಾ ಬಾಗ್ ದುರಂತದಲ್ಲಿ ಹುತಾತ್ಮನಾದ ಪತಿಯ ಹೆಣಕ್ಕೆ ಹೆಗಲು ಕೊಟ್ಟು ಮನೆಗೆ ಹೊತ್ತು ತಂದಿದ್ದರು.

ಪ್ಯಾಲೆಸ್ಟೀನ್‌ನಲ್ಲಿ ಪರಿಚಯವಾದ ಬ್ರೆಡ್ಡು ರೊಟ್ಟಿ ಮಾಡುವ ಸಣ್ಣ ಬೇಕರಿಯ ನಾದಿರ್ ಅಬು ದಯೇ ಅವರ ಮನೆಗೆ ನೀಡಿದ ಭೇಟಿ ಮರೆಯಲಾಗದ್ದು. ಅವರದ್ದು ಸಾಧಾರಣ ಮನೆ. ಐಷಾರಾಮದ ವಸ್ತುಗಳಿರುವುದು ಸಾಧ್ಯವೇ ಇಲ್ಲದ ಸ್ಥಿತಿ. ವಿದ್ಯಾವಂತರಾದರೂ ಅವರಿಗಲ್ಲಿ ಕೆಲಸವಿಲ್ಲ. ಅವಕಾಶಗಳಿಲ್ಲ. ಆತನ ಮಡದಿ, ಓವನ್‌ನಲ್ಲಿ ದೊಡ್ಡ ತಗಡಿನ 'ಗಂಗಾಳ'ದಲ್ಲಿ ಮೆಂತ್ಯದ ಹಲ್ವಾ ಮಾಡಲು ಇಟ್ಟಿದ್ದರು. ಆ ಸಿಹಿ ತಿನಿಸಿನ ಹೆಸರು 'ಹಿಲ್ಬಾ'. ಅದನ್ನು ಹೊರತೆಗೆದು, ಪಿಂಗಾಣಿ ತಟ್ಟೆಯ ತುಂಬಾ ಹಾಕಿ ನೀಡಿದರು. ಮೆಂತ್ಯದ ಕಹಿಯೇ ಇರದಷ್ಟು ಸವಿಯಾದ ಸಿಹಿ ತಿಂಡಿಯನ್ನು ಮೆಲ್ಲುತ್ತಾ, ಅವರ ಬದುಕಿನ ಕಹಿ ಕತೆಗಳನ್ನು ನಾನು ಮತ್ತು ಗೆಳತಿ ಗೀತಾ ಕೇಳುಕೇಳುತ್ತಲೇ ರಾತ್ರಿ ತುಂಬಾ ತಡವಾಗಿ ಹೋಯಿತು. ನಾವು ನಮ್ಮ ಹೋಟೆಲಿಗೆ ಹೊರಡಲೇ ಬೇಕಿತ್ತು. ನಮ್ಮ ಕೈಯಲ್ಲಿದ್ದ ಅಷ್ಟೊಂದು ಸಿಹಿಯನ್ನು ಮುಗಿಸಲಾಗಿರಲಿಲ್ಲ. 'ತಡೆಯಿರಿ ಕಟ್ಟಿಕೊಡುತ್ತೇನೆ' ಎಂದು ಆಕೆ, ಪಿಂಗಾಣಿ ತಟ್ಟೆಯ ಸಮೇತ ಕಟ್ಟಿ ಕೈಗಿಟ್ಟರು! ಇಂದು ಕೂಡಾ ನಮ್ಮ ಮನೆಯ ಶೋಕೇಸಿನಲ್ಲಿ, ಪ್ಯಾಲೆಸ್ಟೀನ್ ಜನರ ಪ್ರೀತಿ ಸ್ನೇಹದ ಕುರುಹಾಗಿ ಆ ಪಿಂಗಾಣಿ ತಟ್ಟೆ ಇದೆ. ಹಾಗೆಯೇ ಭಾಷೆ ಬಾರದ ಪೆರುವಿನಲ್ಲಿ ಅಲೆದ ಪ್ರತಿಕ್ಷಣವೂ ಅಪೂರ್ವವಿತ್ತು. ಅಮೆಜಾನ್ ಕಾಡುಗಳಲ್ಲಿ ರಾತ್ರಿ ಕಳೆದದ್ದು, ಅದರಲ್ಲೂ ಅಮೆಜಾನ್ ನದಿಯ ಮೇಲೆ, ಪೆರುವಿನಿಂದ ಬ್ರೆಜಿಲ್‌ಗೆ, ಮತ್ತೆ ಹಿಂದಕ್ಕೆ

